# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.231-2018** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಕೆ.ಭಾಗ್ಯಶ್ರೀ<br>ಸಿಂಧುವಳ್ಳಿಪುರ ಗ್ರಾಮ, ನಂಜನಗೂಡು. |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 13-10-2023. |

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಆರ್.ಎಂ.ಎಸ್ ವಕೀಲರಿಂದಃ</u>**

ದಾವಾ 2 ನೇ ಐಟಂ ಸ್ವತ್ತು ವಿಭಾಗದ ಮುಖೇನ 3 ನೇ ಪ್ರತಿವಾದಿ ಭಾಗಕ್ಕೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿಗೆ ವಿವಾಹವಾಗದೇ ಇರುವ ಕಾರಣ ದಾವಾ 2 ನೇ ಐಟಂ ಸ್ವತ್ತನ್ನು ವಿಭಾಗದ ಮುಖೇನ ಆಕೆಯ ಜೀವನಾಂಶಕ್ಕಾಗಿ ನೀಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಹೇಳುವಂತೆ ಪ್ರತಿವಾದಿಗಳು ನನಗೆ ಜೀವನಾಂಶ ನೀಡಬೇಕು ಎಂಬ ಉದ್ದೇಶದಿಂದ ದಾವಾ ಆಸ್ತಿಗಳನ್ನು ಮಾರಾಟ ಮಾಡಿ ಊರು ಬಿಟ್ಟು ಹೋಗುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ನನ್ನ ಅತ್ತೆ ಮಾವ ನನಗೆ ಹಿಂಸೆ ನೀಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ನನಗೆ ವದಕ್ಷಿಣೆ ತರುವಂತೆ ಹಿಂಸೆ ನೀಡುತ್ತಿದ್ದರು ಎಂದು ನುಡಿಯುತ್ತಾರೆ. ನನಗೆ ಪ್ರತಿವಾದಿಗಳು ಮತ್ತು ನನ್ನ ಅತ್ತೆ ವರದಕ್ಷಿಣೆ ತರುವಂತೆ ನನಗೆ ಹಿಂಸೆ ನೀಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ವಾದ ಪತ್ರದಲ್ಲಿ ಹೇಳಿರುವಂತೆ ಪ್ರತಿವಾದಿಗಳು ಮತ್ತು ನನ್ನ ಅತ್ತೆ ನನಗೆ ಕಷ್ಟಕರವಾದ ಕೆಲಸಗಳನ್ನು ನೀಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ಹಾಗೂ ನನ್ನ ಅತ್ತೆ ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ನಾನು ಹೇಳದೇ ಕೇಳದೆ ಮನೆ ಬಿಟ್ಟು ಬಂದಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳದೇ ಕೇಳದೇ ಪದೇ ಪದೇ ಮನೆ ಬಿಟ್ಟು ಬರುತ್ತಿದ್ದುದ್ದರಿಂದ ಪಂಚಾಯ್ತಿ ಸೇರಿಸಲಾಗಿದ್ದು, ಸದರಿ ಪಂಚಾಯ್ತಿಯಲ್ಲಿ ಪಂಚಾಯ್ತಿದಾರರ ನನಗೆ ನನ್ನ ಪತಿ 1 ನೇ ಪ್ರತಿವಾದಿ ಜೊತೆ ಜೀವನ ನಡೆಸುವಂತೆ ಬುದ್ಧಿವಾದ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಪಂಚಾಯ್ತಿದಾರರು ಬುದ್ಧಿವಾದ ಹೇಳಿದರು ನಾನು ಅವರ

ಮಾತನ್ನು ಕೇಳಲಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು 1 ನೇ ಪ್ರತಿವಾದಿಯೇ ಪಂಚಾಯ್ತಿದಾರರ ಮಾತನ್ನು ಕೇಳುತ್ತಿರಲಿಲ್ಲ ಎಂದು ನುಡಿಯುತ್ತಾರೆ. ನಾನೇ ಸ್ವತಃ ಹೇಳದೇ ಕೇಳದೇ ಮನೆ ಬಿಟ್ಟು ಬಂದಿರುವುದರಿಂದ 1 ನೇ ಪ್ರತಿವಾದಿ ಯಾವುದೇ ಜೀವನಾಂಶವನ್ನು ನೀಡಬೇಕಾಗಿರುವುದಿಲ್ಲ ಎಂದರೆ ಸರಿಯಲ್ಲ. ಒಂದು ವೇಳೆ ನೀವು ಹೇಳುವಂತೆ ಪ್ರತಿವಾದಿಗಳು ಹಾಗೂ ನಿಮ್ಮ ಅತ್ತೆ ವರದಕ್ಷಿಣೆ ಕಿರುಕುಳ ನೀಡಿದ ಪಕ್ಷದಲ್ಲಿ ನೀವು ಪೊಲೀಸರ್ ಠಾಣೆಗೆ ದೂರು ನೀಡುತ್ತಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ಸದರಿಯವರು ನನ್ನ ಸಂಬಂಧಿಕರಾಗಿರುವುದರಿಂದ ದೂರು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಗೆ ಆರೋಗ್ಯ ಸರಿ ಇಲ್ಲದೇ ಇರುವ ಕಾರಣ ಯಾವುದೇ ಕೆಲಸಕ್ಕೆ ಹೋಗುತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ಚಾಲಕರಾಗಿ ಕೆಲಸಕ್ಕೆ ಹೋಗುತ್ತಿದ್ದು ಅವರಿಗೆ ತಿಂಗಳೊಂದಕ್ಕೆ ರೂ.20,000/- ಗಳ ಸಂಬಳ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಹೇಳುವಂತೆ 1 ನೇ ಪ್ರತಿವಾದಿ ಯಾವುದೇ ಕೆಲಸಕ್ಕೆ ಹೋಗುತ್ತಿಲ್ಲವಾದ್ದರಿಂದ ಅವರಿಗೆ ಯಾವುದೇ ಆದಾಯ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ಶಾಲಾ ಬಸ್ಸಿನ ಚಾಲಕರಾಗಿ ಕೆಲಸಮಾಡುತ್ತಿದ್ದು, ರಸ್ತೆ ಬದಿಯಲ್ಲಿ ಹೋಟೆಲ್ ಇದ್ದು, ಜಮೀನು ಮತ್ತು ಮನೆಗಳು ಇದ್ದು 4 ಮನೆಗಳನ್ನು ಬಾಡಿಗೆಗೆ ಬಿಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯವರಿಗೆ ಜಮೀನು, ಹೋಟೆಲ್ ಮತ್ತು ಮನೆಗಳು ಇವೆ ಎಂದು ನಾನು ನನ್ನ ವಾದ ಪತ್ರದಲ್ಲಿ ಹೇಳಿ ಬರೆಸಲು ಏನಾದರೂ ತೊಂದರೇ ಇತ್ತೇ ಎಂಬ ಪ್ರಶ್ನೆಗೆ ಸಾಕ್ಷಿ ಆ ಸಮಯ ನನ್ನ ವಕೀಲರಿಗೆ ಹೇಳಲಾಗಲಿಲ್ಲ ಎಂದು ನುಡಿಯುತ್ತಾರೆ. ನಾನು ಹೇಳುವಂತೆ ಹೋಟೆಲ್ ಮತ್ತು ಮನೆಗಳು ಇಲ್ಲದೇ ಇರುವುದರಿಂದ ನನ್ನ ವಾದ ಪತ್ರದಲ್ಲಿ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ 1 ನೇ ಪ್ರತಿವಾದಿ ಚಾಲಕರಾಗಿ ಕೆಲಸ ಮಾಡುವುದಿಲ್ಲ, ಅವರಿಗೆ ಸೇರಿದ ಹೋಟೆಲ್ ಮತ್ತು ಮನೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಜಮೀನು ಖುಷ್ಕೀ ಜಮೀನಾಗಿದ್ದು ಅಲ್ಲಿ ಯಾವುದೇ ಬೆಳೆ ಬೆಳೆಯುತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಬೆಳೆ ಬೆಳೆಯುತ್ತಿದ್ದು ಅಲ್ಲಿ ಪಂಪ್‌ಸೆಟ್ ಸಹ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಹೇಳುವಂತೆ ಜಮೀನಿನಲ್ಲಿ ಪಂಪ್‌ಸೆಟ್ ಇರುವುದಿಲ್ಲ ಎಂದರೆ ಸರಿಯಲ್ಲ. ನಾನೇ ಮನೆ ಬಿಟ್ಟು ಬಂದಿರುವುದರಿಂದ 1 ನೇ ಪ್ರತಿವಾದಿ ನನಗೆ ಯಾವುದೇ ಜೀವನಾಂಶ ನೀಡಬೇಕಾಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರೇ ಮನೆ ಬಿಟ್ಟು ನನ್ನನ್ನು ಓಡಿಸಿರುತ್ತಾರೆ ಎಂದು

ನುಡಿಯುತ್ತಾರೆ. ನಾನು 1 ನೇ ಪ್ರತಿವಾದಿಯಿಂದ ಜೀವನಾಂಶ ಪಡೆಯುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/ –**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**